(SRI M. MADIAH.)

ಬೇಕೆಂದು ನನ್ನ ಸೂಚನೆ. ನಮ್ಮ ಮೈಸೂರು ಸಂಸ್ಥಾನದ ವಿಚಾರದಲ್ಲಿ ಹೊರಗಿನವರು ಬಹಳ ಒಳ್ಳೆಯ ಅಭಿಪ್ರಾಯವನ್ನು ಇಟ್ಟು ಕೊಂಡಿರುತ್ತಾರೆ. ಅದನ್ನ keep up ಮಾಡಬೇಕೆಂದು ಸರ್ಕಾರದವರನ್ನು ವಿನಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. Weaker Section ನವರಿಗೆ ರಾಜ್ಯಾಂಗದಲ್ಲಿ ವಿಧಿನಲ್ಪಟ್ಟಿರು ವಂತೆ adequate safeguard ಇಲ್ಲವೆಂಬ ಶಂಕೆಗೆ ಮಾತ್ರ ಅವಕಾಶ ಕೊಡಬಾರದೆಂದು ಅವರಲ್ಲಿ ನನ್ನ ವಿನಯ ಪ್ರಾರ್ಥನೆ.

ಅಧ್ಯಕ್ಷರು.—ಹೆಚ್ಚಾಗಿ ಕೇಳುವುದಿದ್ದರೆ ಕೇಳಿ, ಹಾಗಿಲ್ಲದೆ ಸರ್ಕಾರದವರು ಏನೂ ಸೌಕರ್ಯ ಒದಗಿಸಿಲ್ಲ ವೆಂದು ಹೇಳಿದರೆ ಅದು ಸರಿಯಲ್ಲ.

Mr. SPEAKER.—Cut motion moved :

" That the demand be reduced by Rs. 100. "

The House will now rise for lunch and meet again at 3-30.

The House adjourned for Lunch at Eight Minutes past Three of the Clock and reassembled at Thirty-eight Minutes past Three of the Clock.

[MR. SPEAKER in the Chair]

Statement by Sri Mulka Govinda Reddy.

Sri Mulka GOVINDA REDDY (Chitaldrug).—Sir, I request you to kindly permit me to make a statement in order to clear any possible misapprehension resulting from the statement of the Chief Minister the other day that I tried to influence him and that he did not yield to it. In view of your ruling given earlier, precluding the question being raised now, it has become necessary to make this statement to clear such misapprehensions.

It may be that in my capacity as a member of the Legislature, I meet the Chief Minister or other Ministers to urge for consideration of certain legitimate grievances of the public or a section of them, as I consider that it is my duty to do so. But I can assure you, Sir, and through you the members, that I never approached the Chief Minister on behalf of any officer in respect of revision of age.

Thank you, Sir.

ಶ್ರೀ ಎಚ್. ಕೆ. ಸಿದ್ದಯ್ಯ (ಬೇಲೂರು-ಅನುಸೂಚಿತ ಜಾತಿಗಳು).—ಸ್ಪಾಮಿ, ಈ ಖೋತಾ ನಿರ್ಣಯವನ್ನು ಅನುಮೋದಿಸುತ್ತಾ ಒಂದೆರಡು ವಿಚಾರಗಳನ್ನು ತಿಳಿಸಲಿಚ್ಛಿಸುತ್ತೇನೆ. ನನಗೆ ಖಾಯಿಲೆಯಾಗಿದ್ದರೂ ಸಹ ಈ ವಿಚಾರದ ಮೇಲೆ ಒಂದೆರಡು ಅಂಶಗಳನ್ನು ತಿಳಿಸಬೇಕೆಂದು ಮನಸ್ಸು ಬಾಧಿಸುತ್ತಿದೆ.

ಮೈಸೂರು ಸಂಸ್ಥಾನದಲ್ಲಿ ಬೋರ್ಡಿಂಗ್ ಹೋಂಗಳಿಗೆ ಎಷ್ಟು ವರ್ಷಗಳಿಂದ ಪ್ರಸ್ತಾಪಿಸುತ್ತಿದ್ದರೂ ಆಗಿನಿಂದಲೂ ಒಂದೇ ರೀತಿ ಗ್ರಾಂಟು ಕೊಡುತ್ತಿದ್ದಾರೆ. ಹಿಂದೆ ಒಂದು ರೂಪಾಯಿಗೆ ಹತ್ತು ಸೇರು ಅಕ್ಕಿ, ಹದಿನಾಲ್ಕು ಸೇರು ರಾಗಿ ಇತ್ತು. ಈಗ ಒಂದು ರೂಪಾಯಿಗೆ ಒಂದೂವರೆ ಸೇರು ಅಕ್ಕಿ, ಮೂರು ಸೇರು ರಾಗಿ ಇದೆ. ಈಗಲೂ ಸಹ ಅದೇ ಗ್ರಾಂಟನ್ನೇ ಕೊಡುತ್ತಿದ್ದಾರೆ. ಜೈಲಿನಲ್ಲಿ ಕಠಿಣಜನರಾ ಅನುಭವಿಸುತ್ತಿರುವವರಿಗಾದರೂ ಹೆಚ್ಚಾಗಿ ದೊರಕುತ್ತಿದೆ. ಅದೇ ಬೋರ್ಡಿಂಗ್ ಹೋಂಗಳಲ್ಲಿರುವ ಮಕ್ಕಳು ಅನುಭವಿಸುತ್ತಿರುವ ಕಷ್ಟ ಹೇಳತೀರದು. ಇದೇ ವಿಚಾರದಲ್ಲಿ ಪಾಲಸಿ ಸಮಿತಿಯಲ್ಲಿ ಸಹ ನಾವು ಒಂದು ನಿರ್ಣಯ ಮಾಡಿ ಅದನ್ನು ಸರ್ಕಾರದವರಿಗೆ ಕಳುಹಿಸಿದ್ದೇವೆ. ಅದು ಏನಾಯಿತೋ ಗೊತ್ತಾಗಲಿಲ್ಲ; ಮತ್ತು ಸಂಸ್ಥಾನಾಮಳೆ ಹಿಂದುಳಿದ ಪಂಗಡದವರ ಏಳಿಗೆಯ ವಿಚಾರದಲ್ಲಿ ಡೈರೆಕ್ಟರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ನಡೆದು ಅದರಲ್ಲಿ ನಿರ್ಣಯವೊಂದನ್ನು ಮಾಡಿ ಸರ್ಕಾರಕ್ಕೆ ಕಳುಹಿಸಿದೆ. ಅದರ ವಿಚಾರ ಸಹ ಗೊತ್ತಿಲ್ಲ. ಈದಿನ ನಮ್ಮ ಸರ್ಕಾರದವರು ವಿದ್ಯಾಭ್ಯಾಸಕ್ಕಾಗಿ ನಾಲ್ಕುಕೋಟಿ ರೂಪಾಯಿಗಳನ್ನು ಒದಗಿಸುತ್ತಾರೆ. ಹೀಗೆ ವರ್ಷ್ ವರ್ಷ್ ಈ ಬಗ್ಗೆ ಹಣವನ್ನು ಜಾಸ್ತಿಯಾಗಿ ಒದಗಿಸುತ್ತಿದ್ದರೂ ಸಹ ಅದು ಹೇಗೆ ಖರ್ಚಾಗುತ್ತಿದೆಯೆಂಬ ಬಗ್ಗೆ ಶಂಕೆ ಉಂಟಾಗಲು ಅವಕಾಶವಾಗಿದೆ. ಹೈನ್ಯೂಲು ಮತ್ತು ಮಿಡ್ಲ್ ಸ್ಕೂಲ್ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಹೆಚ್ಚಿಸಬೇಕು, ಹರಿಜನರಿಗೆ ಮಾತ್ರವಲ್ಲದೆ ಇತರ ಹಿಂದುಳಿದ ಕೋಮಿನವರಿಗೂ ಈ ವಿಚಾರದಲ್ಲಿ ಹೆಚ್ಚಿನ ಪರಿಹಾರ ದೊರಕಬೇಕು ಎಂಬ ಮನವಿ ಈಗ್ಗೆ ನಾಲ್ಕಾರು ವರ್ಷಗಳಿಂದಲೂ ಸರ್ಕಾರದವರಿಗೆ ಈ ನಭೆಯ ಮೂಲಕವೂ, ಇತರ ವಿಧಾನಗಳಲ್ಲೂ ಬರುತ್ತಿದೆ. ಈಗ್ಗೆ ಆರು ವರ್ಷಗಳಿಂದ ಸರ್ಕಾರದ ಮುಂದಿಡುತ್ತಿದ್ದ ಈ ಬೇಡಿಕೆ ಪ್ರಜಾನರ್ಕಾರ ಬಂದಮೇಲಾದರೂ ಈಡೇರುತ್ತದೆಂಬ ನಮ್ಮ ನಂಬಿಕೆ ಈಗ ನಿರಾಶಾದಾಯಕವಾಗಿದೆಯೆಂದು ತಿಳಿಸಲು ನನಗೆ ಬಹಳ ವ್ಯಸನವಾಗುತ್ತದೆ. ಈವರ್ಷ ಹಾಸನ ಡಿಸ್ಟ್ರಿಕ್ಟಿನಲ್ಲಿ ಹೈನೂಲ್ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಹಂಚಿಕೆಯಾಗುವುದರಲ್ಲಿ 60-70 ಅರ್ಜಿಗಳು ಬಂದಿದ್ದರೂ allotment ಒಂಬತ್ತಕ್ಕೆ ಮಾತ್ರ. ಅದರಲ್ಲಿ ಐದು ಮಂದಿಗೆ renew ಆಗಿಹೆ, ಮಿಕ್ಕ ನಾಲ್ಕುಮಂದಿಗೆ ಹೊಸದಾಗಿ ಸಿಕ್ಕಿದೆ. ಹೀಗಾದರೆ ಇದು ಯಾವ ರೀತಿ ಹಂಚಿಕೆ ಎಂಬುದನ್ನು ಯೋಚಿಸಬೇಕು. ಈ ರೀತಿ ಬಡ ಜನಾಂಗವನ್ನು ಉದ್ಧಾರ ಮಾಡಬೇಕೆಂದು ಇಂಡಿಯಾ ಸರ್ಕಾರವವರು ರಾಜ್ಯಾಂಗ ವಿಧಿಯಲ್ಲಿ ಸಹ ವಿಧಿವತ್ತಾಗಿ ತಿಳಿಸಿರುವಾಗ ಈ ರೀತಿ ವಿದ್ಯಾಭ್ಯಾಸಕ್ಕಾಗಿ ಹೆಚ್ಚಿನ ಉತ್ತೇಜನವನ್ನು ಕೊಟ್ಟು ಇವರನ್ನು ಮುಂದುವರಿಸದಿದ್ದರೆ ಏನು ಪ್ರಯೋಜನ? ಹಿಂದುಳಿದ ಜನಾಂಗ ಹರಿಜನರಲ್ಲಿ ಮಾತ್ರವೇ ಅಲ್ಲದೆ ಇತರ ಕೋಮುಗಳಲ್ಲೂ ಬೇಕಾದಷ್ಟುಮಂದಿ ಇದ್ದಾರೆ. ಸರ್ಕಾರದವರು ಇಷ್ಟೊಂದು ಹಣವನ್ನು ವಿದ್ಯಾಭಿವೃದ್ಧಿಗಾಗಿ ಖರ್ಚು ಮಾಡುವಾಗ ಇವರಿಗೂ ಒಂದಿಷ್ಟು ಹೆಚ್ಚು ಹಣ ಖರ್ಚು ಮಾಡಿ ಇವರು ಮುಂದುವರಿಯುವುದಕ್ಕೆ ಸಹಾಯಕರಾಗು

ವುದು ಅತ್ಯಗತ್ಯ. ಬಡ ಸ್ಕೂಲ್ ಮಾಸ್ಟರುಗಳ ಸಂಬಳ ಸಾರಿಗೆಗಳನ್ನು ಸ್ವಲ್ಪಮಟ್ಟಿಗಾದರೂ ಹೆಚ್ಚಿಸಿ ಎಂದು ಈ ಸಭೆಯಲ್ಲಿ ಎಷ್ಟುಬಾರಿ ಪ್ರಶ್ನೆಗಳ ಮೂಲಕ, ನಿರ್ಣಯಗಳ ಮೂಲಕ ಸದಸ್ಯರು ಬೇಡಿಕೆಗಳನ್ನು ನಲ್ಲಿಸಿಲ್ಲ? ಅದಕ್ಕೆ ಸ್ವಲ್ಪವಾದರೂ ಪುರಸ್ಕಾರ ದೊರಕಿದೆಯೇ? ಈ ಬಾಬಿಗಾಗಿ ಅಂದರೆ ವಿದ್ಯಾಭ್ಯಾಸಕ್ಕಾಗಿ ನಾಲ್ಕುಕೋಟಿ ರೂಪಾಯಿಗಳವರೆಗೂ ಹಣ ಯಾವ ರೀತಿ ಖರ್ಚಾಗುತ್ತಿದೆಯೋ ಗೊತ್ತಾಗುವುದಿಲ್ಲ. ಪ್ರಜಾಸರ್ಕಾರ ಬಂದ ಮೇಲೆ ಗ್ರಾಮಾಂತರ ಪ್ರದೇಶಗಳಲ್ಲಿ ಬಹಾತ್ಕಾರ ವಿದ್ಯಾಭ್ಯಾಸ ಕ್ರಮವನ್ನು ಜಾರಿಗೆ ತಂದಿರುತ್ತಾರೆ. ಆದರೆ ಇದಕ್ಕಾಗಿ ಖರ್ಚು ಮಾಡುತ್ತಿರುವ ಹಣ ಯಾವ ರೀತಿ ಖರ್ಚಾಗುತ್ತಿದೆಯೋ ಕಾಣುತ್ತಿಲ್ಲ. ಬೋರ್ಡಿಂಗ್ ಹೋಂಗಳಲ್ಲಿರುವ ವಿದ್ಯಾರ್ಥಿಗಳಿಗೆ ತಲಾ ತಿಂಗಳಿಗೆ 15 ರೂಪಾಯಿ ನಲ್ಲುವಂತೆ, ಒಪ್ಪೊತ್ತಿನ ಊಟದ ಖರ್ಚಾದರೂ ನುಗಮವಾಗಿ ಸಾಗಿಸಲು ಅನುಕೂಲವಾಗುವಂತೆ ಒದಗಿಸಿಕೊಟ್ಟರೆ ಎಷ್ಟೋ ಅನುಕೂಲವಾಗುತ್ತದೆ. ನಮ್ಮ ಕಡೆಗೆ ಮಾನ್ಯ ಸಚಿವರು ಪ್ರವಾಸ ಬಂದಿದ್ದಾಗ ಅವರಿಗೆ ಇವರ ಕಷ್ಟವೇನೆಂಬುದು ವೇದ್ಯವಾಗಿದೆ. ಸರ್ಕಾರದವರು ಈ ವಿಚಾರವನ್ನು ಸಹಾನುಭೂತಿಯಿಂದ ಪರಿಶೀಲಿಸಿ ಹರಿಜನರಿಗೆ ಮಾತ್ರವಲ್ಲದೆ, ಬಡತನದ ಬೇಗೆಗೆ ಸಿಕ್ಕಿರುವ ಇತರ ಹಿಂದುಳಿದ ಕೋಮಿನವರಿಗೂ ಹಣ ಸಹಾಯ ಮಾಡಿ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ಕೋರುತ್ತೇನೆ. ಅನೇಕ ಗ್ರಾಮಗಳಲ್ಲಿ ವಿದ್ಯಾಭ್ಯಾಸಕ್ಕೆ ಪ್ರೈಮರಿ ಸ್ಕಾಸಂಗಕ್ಕೆ ಕಟ್ಟಡಗಳಿಲ್ಲ. ವಿದ್ಯೆಗೆ ತಳಹದಿಯೋಪಾದಿಯಲ್ಲಿರುವ ಈ ಪ್ರೈಮರಿ ವಿದ್ಯಾಭ್ಯಾಸದ ವಿಚಾರದಲ್ಲಿ ಸರ್ಕಾರದವರು ಹೆಚ್ಚಿನ ಉತ್ತೇಜನ ಕೊಡುವುದು ಅವರ ಕರ್ತವ್ಯವೆಂದು ತಿಳಿಯಬೇಕು. ಅನೇಕ ಬಡವರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಮಾರ್ಗವಿಲ್ಲದೆ, ಲೋಯರ್ ಸೆಕೆಂಡರಿಯಾದ ಕೂಡಲೇ ಮುಂದೆ ಅವರನ್ನು ಓದಿಸಲು ಹಣ ಸಹಾಯವಿಲ್ಲದೆ, ಚೈತನ್ಯವಿಲ್ಲದೆ ಹಾಗೆಯೇ ಬಿಟ್ಟಿರುತ್ತಾರೆ. ಇಂಥವರಿಗೆ ವಿದ್ಯಾರ್ಹತೆ ಇಲ್ಲದೆ, ಕೆಲಸಕ್ಕೆ ಸೇರಲು ಸಹಅರ್ಹತೆ ಇಲ್ಲದೆ ಅಲೆದಾಡುವ ಪರಿಸ್ಥಿತಿ ಬಂದಿದೆ. ಜನತೆ ಹೆಚ್ಚಿನ ವಿದ್ಯಾರ್ಹತೆಯನ್ನು ಪಡೆದಷ್ಟೂ ಆ ದೇಶದ ಅಭಿವೃದ್ಧಿ ಸಾಧನೆಯಾಗುತ್ತದೆಂದು ಸರ್ಕಾರದವರು ಮನಗಂಡು ಇವರಿಗೆ ವಿದ್ಯಾರ್ಹತೆಗಾಗಿ ಹೆಚ್ಚಿನ ಸೌಲಭ್ಯವನ್ನು ಕಲ್ಪಿಸಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಚಾರ ಹೇಳುತ್ತೇನೆ. ಈಗ ನೋಡಿ, ನಣ್ಣನಣ್ಣ ನೌಕರರಿಗೆ, ಎಂದರೆ, ಉದಾಹರಣೆಗೆ ಒಬ್ಬ ಥಿಸ್ಟ್ರಿಕ್ಟ್ ಕಚೇರಿ ಜವಾನನನ್ನು ತೆಗೆದುಕೊಳ್ಳಿ, ಅವನು ಜವಾನ ಚಾಕರಿ ಮಾಡುತ್ತಾನೆ. ಅವನಿಗೆ ಅನ್ನಮಾಡುವುದಕ್ಕೆ ಸಾಕಾಗದೇ ಇರುವಷ್ಟು ಸಂಬಳ ಕೊಡುತ್ತಾ ಇದ್ದೀರಿ. ಅದೇ ಒಬ್ಬ ಡೆಪ್ಯುಟಿ ಕಮೀಷನರು. ಒಬ್ಬ ರೆವಿನ್ಯೂ ಇನ್‌ಸ್ಪೆಕ್ಟರು ಇವರುಗಳಿಗೆ ಕೊಡುತ್ತಾ ಇರುವ ಸಂಬಳ ನೋಡಿ, ಎಷ್ಟು ಜಾಸ್ತಿ ಇದೆ! ಆದರೆ ಆ ಜನಸಂಖ್ಯೆ ಈ ಜನಸಂಖ್ಯೆ ಮಾತ್ರ ಒಂದೇ ಇದೆ. ಇಷ್ಟು ಕಡಿಮೆ ಸಂಬಳದಲ್ಲಿ ಯಾವ ರೀತಿ ಅವನು ಹೆಂಡತಿ ಮಕ್ಕಳನ್ನು ಸಾಕಬೇಕು, ಜೀವನ ಮಾಡಬೇಕು ಎಂಬುದನ್ನು ಯೋಚನೆ ಮಾಡಿದರೆ, ಅವನಿಗೆ ಬಹಳ ಕಷ್ಟವಾಗುತ್ತದೆ. ಈ ದೆಶೆಯಿಂದ ಸರ್ಕಾರದವರು ಬಡವರಿಗೆ, ಕೇವಲ ಕೆಳದರ್ಜೆಯಲ್ಲುರತಕ್ಕವರಿಗೆ ಅವರ ಕಷ್ಟವನ್ನು ನಿವಾರಣೆ ಮಾಡಲು, ಹೆಚ್ಚು ಹಣವನ್ನು ಒದಗಿಸಿ ಸಹಾಯವನ್ನು ಮಾಡಬೇಕೆಂದು ಹೇಳಿ ಪ್ರಾರ್ಥನೆ ಮಾಡುತ್ತೇನೆ.

ಈಗ ಮಿಡ್ಲ್ ಸ್ಕೂಲ್ ವಿದ್ಯಾರ್ಥಿಗಳ ಸ್ಕಾಲರ್‌ಷಿಪ್ಪು ಬಹಳ ಕಮ್ಮಿಯಾಗಿದೆ. ವಿದ್ಯಾರ್ಥಿಗಳ ಸಂಖ್ಯೆ ರೆಕ್ಕಾಚಾರ ಮಾಡಿದರೆ ಅದನ್ನು ಹೆಚ್ಚತಕ್ಕ ಕಷ್ಟ ಎಷ್ಟಿದೆ ಎಂಬುದನ್ನು ಹೇಳತೀರದು. ಆ ವಿಚಾರದಲ್ಲಿ ಶ್ರೀ ಮಾದಯ್ಯನವರು ಹೇಳಿದಹಾಗೆ ಮೂರು ನಾಲ್ಕು ವರ್ಷಗಳಿಂದಲೂ ಯಾವ ರೀತಿ ಕೊಡುತ್ತಾ ಇದ್ದಿರೋ ಅದೇ ರೀತಿ ಇವೊತ್ತೂ ಸಹ ಕೊಡುತ್ತಾ ಇದ್ದೀರಿ. ನಾನೂ ಕೂಡ ಸ್ಕಾಲರ್‌ಷಿಪ್ ಕಮಿಟಿ ಮೆಂಬರಾಗಿದ್ದು ಈಗ ತಾವು ಕೊಟ್ಟಿರತಕ್ಕ ಸ್ಕಾಲರ್‌ಷಿಪ್‌ಗಳನ್ನು ಹಂಚಬೇಕಾದರೆ ಇರುವ ಕಷ್ಟ ಎಷ್ಟಿದೆ ಎಂಬುದು ನನಗೆ ಚನ್ನಾಗಿ ಗೊತ್ತಿದೆ. ಅನೇಕರು ನಮ್ಮ ಮಕ್ಕಳಿಗೆ ಫ್ರೀಷಿಪ್ ಕೊಡಿಸಿ, ಸ್ಕಾಲರ್‌ಷಿಪ್ಪು ಕೊಡಿಸಿ ಎಂದು ಕೇಳುತ್ತಾರೆ. ಅಷ್ಟೇ ಅಲ್ಲದೆ, ನೀವು ನಮ್ಮ ಪ್ರತಿನಿಧಿಗಳಾಗಿದ್ದು ಇಷ್ಟು ಕೂಡ ಸಹಾಯ ಮಾಡದಿದ್ದರೆ ನಮ್ಮ ಪ್ರತಿನಿಧಿಗಳಾಗಿ ಹೋಗಿ ಏನು ಮಾಡುತ್ತೀರಿ ಎಂದು ನಮ್ಮ ಕ್ಷೇತ್ರದಲ್ಲಿ ನಮ್ಮ ಡಿಸ್ಟ್ರಿಕ್ಟ್‌ನಲ್ಲಿ ಹೋದ ಹೋದ ಕಡೆಯಲ್ಲೆಲ್ಲಾ ಬಹಳ ಹೀನಾಯವಾಗಿ ಮಾತನಾಡುತ್ತಾರೆ. ಆದ್ದರಿಂದ ಸರ್ಕಾರದವರು ಆದಷ್ಟು ಜಾಗ್ರತೆ ಬಡ ಜನರ ಹಿತದೃಷ್ಟಿಯಿಂದ ಯೋಚನೆ ಮಾಡಿ, ಒಂದಲ್ಲ ಇನ್ನೊಂದು ಭಾಗದಲ್ಲಿ ಹಣವನ್ನು ಉಳಿಸಿ ಅದನ್ನು ಬಡ ನೌಕರ, ಬಡ ಉಪಾಧ್ಯಾಯರ ಮಕ್ಕಳ ವಿದ್ಯಾಭ್ಯಾಸಕ್ಕೆ ಒದಗಿಸಿಕೊಟ್ಟು ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಈಗ ತಾವು ಪ್ರಿಂಟ್ ಮಾಡಿಸಿ ನಮಗೆ ಒದಗಿಸಿರುವ ಪುಸ್ತಕದಲ್ಲಿ ನೋಡಿದರೆ ಗೊತ್ತಾಗುತ್ತದೆ. ಇತರ ದೇಶಗಳಿಗೂ ನಮ್ಮ ಮೈಸೂರು ದೇಶಕ್ಕೂ ಹೋಲಿಸಿದರೆ ನಾವು ವಿದ್ಯಾಭ್ಯಾಸದಲ್ಲಿ ಎಷ್ಟೋ ಹಿಂದುಳಿದಿದ್ದೇವೆ. ಏಕೆ ಮುಂದುವರಿಸಬಾರದು? ಪ್ರತಿ ವರ್ಷವೂ ವಿದ್ಯಾಭ್ಯಾಸಕ್ಕಾಗಿ ಇಷ್ಟೊಂದು ಹಣ ಖರ್ಚಾಗುತ್ತಿರುವಾಗ ಸರ್ಕಾರದವರು ಆದಷ್ಟು ಜಾಗ್ರತೆ ಬಡ ಜನರನ್ನು ಮುಂದುವರಿಸುವುದಕ್ಕೆ ನ್ಯಾಯವಾದ ರೀತಿಯಲ್ಲಿ ಹಣವನ್ನು ಖರ್ಚು ಮಾಡತಕ್ಕ ಒಂದು ನೀತಿಯನ್ನು ಕಂಡುಹಿಡಿದು ಕೆಲಸ ಕಾರ್ಯಗಳನ್ನು ಮಾಡಬೇಕಾಗಿತ್ತು. ಆ ರೀತಿ ಮಾಡಿಲ್ಲ ಎಂದು ಹೇಳಿ ವಿಷಾದದಿಂದ ಹೇಳಬೇಕಾಗಿದೆ. ಈಗಾಗಲೇ ಹಿಂದಿನ ಆರು ವರ್ಷಗಳಿಂದ ವಿದ್ಯಾಭ್ಯಾಸದ ವಿಚಾರದಲ್ಲಿ ಅನೇಕ ಬದಲಾವಣೆಗಳಾಗಿದ್ದರೂ ಕೂಡ ಬಡವರಿಗೆ ಅನುಕೂಲವಾಗಿಲ್ಲ. ಆದ್ದರಿಂದ ಸರ್ಕಾರದವರು ಆದಷ್ಟು ಜಾಗ್ರತೆ ಬಡವರಿಗೆ ಅನುಕೂಲವನ್ನು ಕಲ್ಪಿಸಿಕೊಡಬೇಕು. ಅಷ್ಟೇ ಅಲ್ಲದೆ ಬಡ ನೌಕರರ ಜೀವನ ಮಟ್ಟವನ್ನು ಹೆಚ್ಚಿಸಿಕೊಟ್ಟು ಸಹಾಯ ಮಾಡಬೇಕು ಎಂದು ಹೇಳಿ ಸರ್ಕಾರದವರನ್ನು ಪ್ರಾರ್ಥಿಸಿ, ನಾನು ಎರಡು ಮಾತುಗಳನ್ನಾಡುವುದಕ್ಕೆ ಅವಕಾಶಕೊಟ್ಟ ಅಧ್ಯಕ್ಷರನ್ನು ವಂದನೆಮಾಡಿ, ಈ ಸಭಾ ಸದಸ್ಯರೆಲ್ಲರಿಗೂ ನಮಸ್ಕಾರ ಮಾಡಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು-ಮೂಡಿಗೆರೆ-ಅನುಸೂಚಿತ ಜಾತಿಗಳು).—ಸಭಾಪತಿಗಳೇ, ಸ್ವಾಮಿ, ಶ್ರೀ ಮಾದಯ್ಯನವರು ತಂದಿರತಕ್ಕ ಈ ಖೋತಾ ನಿರ್ಣಯವನ್ನು ಪುಷ್ಟೀಕರಿಸುವುದಕ್ಕೆ ನನಗೆ ಅವಕಾಶ ಕೊಟ್ಟದ್ದಕ್ಕಾಗಿ ತಮ್ಮನ್ನು ವಂದಿಸುತ್ತೇನೆ. ಈಗಾಗಲೇ ನಂಸ್ಥಾನದ ಒಟ್ಟು ಪ್ರಜಾಸಂಖ್ಯೆಯಲ್ಲಿ ನುಮಾರು 1/5 ಭಾಗ ಹರಿಜನರು ಇದ್ದಾರೆ. ಒಟ್ಟು ವಿದ್ಯಾಭ್ಯಾಸಕ್ಕೆ ಎಷ್ಟು ಹಣ ಖರ್ಚುಮಾಡುತ್ತಾ ಇದ್ದೀರೋ ಅದರಲ್ಲಿ ಹರಿಜನರ ಪ್ರಜಾಸಂಖ್ಯೆಗನುಗುಣವಾಗಿ ಎಷ್ಟು ಹಣ ಖರ್ಚಾಗುತ್ತಾ ಇದೆ ಎಂಬುದನ್ನು ಯೋಚನೆಮಾಡಬೇಕು ಎಂದು ಈ ಮಾನ್ಯ ಸಭೆಯಲ್ಲಿ

(ಶ್ರೀ ಜಿ. ಪುಟ್ಟಸ್ವಾಮಿ.)

ನಾನು ಹೇಳುತ್ತೇನೆ. ಹಾನ್ಸ್‌ಲುಗಳಿಗೆ ಸಂಸ್ಥಾನಾಮಳೆ ಗ್ರಾಂಟ್‌ಗಾಗಿ ಎಷ್ಟು ಖರ್ಚುಮಾಡುತ್ತಾ ಇದ್ದೀರಿ, ಅದರಲ್ಲಿ ನ್ಯಾಯವಾಗಿಯೂ ಪ್ರಜಾನಂಬ್ಯೆಗನುಗುಣವಾಗಿ ಹರಿಜನರಿಗೆ ಹಣ ಖರ್ಚುಮಾಡಲಾಗುತ್ತಿದೆಯೇ? ಹರಿಜನರ ವಿದ್ಯಾಭ್ಯಾಸಕ್ಕೆ ಸರಿಯಾದ ಸೌಕರ್ಯ ಕೊಡಲಾಗುತ್ತಿದೆಯೇ? ಎಷ್ಟು ಹರಿಜನರು ಪ್ರೈಮರಿ ಸ್ಕೂಲು, ಮಿಡ್ಲ್ ಸ್ಕೂಲು, ಹೈಸ್ಕೂಲು, ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ, ಎಷ್ಟು ಜನರಿಗೆ ವಿದ್ಯಾಭ್ಯಾಸ ಮಾಡುವುದಕ್ಕೆ ಅನುಕೂಲವಿದೆ ಎಂಬುದನ್ನು ಯೋಚನೆ ಮಾಡಿದರೆ ಅನೇಕರಿಗೆ ವಿದ್ಯಾಭ್ಯಾಸ ಮಾಡಲು ಅನುಕೂಲವಿಲ್ಲದೆ ಬಿಟ್ಟು ಬಿಟ್ಟಿದ್ದಾರೆ ಎಂಬುದನ್ನು ವಿಷಾದದಿಂದ ಹೇಳಬೇಕಾಗಿದೆ. ಅಷ್ಟೇ ಅಲ್ಲದೆ ಅವರನ್ನು ಕೆಲವುಕಡೆ ಇತರರ ಜೊತೆಗೆ ಸೇರಿಸಿಕೊಳ್ಳುವವರಾಗಿದ್ದಾರೆ ಎಂಬುದನ್ನು ದುಃಖದಿಂದ ಹೇಳುತ್ತಿದ್ದೇನೆ. ಹೊಟ್ಟೆಗೆ ಇಲ್ಲದೆ, ಬಟ್ಟೆಗೆ ಇಲ್ಲದೆ, ಜೀವನೋಪಾಯಕ್ಕೆ ಯಾವುದೇ ಒಂದು ವಿಧವಾದ ಆಧಾರವೂ ಇಲ್ಲದಂಥ ವಿದ್ಯಾರ್ಥಿಗಳು ಸರ್ಕಾರದ ಸಹಾಯ ದೊರೆಯದಿದ್ದರೆ ಯಾವರೀತಿ ವಿದ್ಯಾಭ್ಯಾಸ ಮಾಡಬೇಕೋ ನನಗಂತೂ ಅರ್ಥವಾಗುವುದಿಲ್ಲ. ಈ ಕಾರಣದಿಂದ ಹರಿಜನರಿಗೆ ವಿದ್ಯಾಭ್ಯಾಸ ಸೌಕರ್ಯಗಳನ್ನು ಹೆಚ್ಚಿಸುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳವರು ವಿಧಾನಪರಿಷತ್ತಿನಲ್ಲಿ ಅಶ್ವಾಸನೆಮಾಡಿದ್ದಾರೆ ಎಂದು ತಿಳಿದುಬರುತ್ತದೆ. ಇದು ಸಂತೋಷದ ವಿಷಯ. ನಿಮ್ಮ ತರಗತಿಗಳವರ ವಿದ್ಯಾಭಿವೃದ್ಧಿಗೆ ಹಾನ್ಸ್‌ಲುಗಳಿಗಾಗಿ ಹೆಚ್ಚು ಗ್ರಾಂಟ್ ಒದಗಿಸುತ್ತೇವೆ ಎಂದು ಹೇಳಿರುವುದು ಪ್ರಗತಿದಾಯಕವಾದ ಭರವಸೆಯಾಗಿದೆ. ಈ ರೀತಿ ಗ್ರಾಂಟನ್ನು ಹೆಚ್ಚಿಸುವ ವಿಷಯದಲ್ಲಿ ಮಾನ್ಯ ಸಭೆಯ ಅನೇಕ ಸದಸ್ಯರುಗಳ ಮತ್ತು ದೇಶದಲ್ಲಿರತಕ್ಕ ಜನಗಳ ಒಂದು ಸದಭಿಪ್ರಾಯಕ್ಕೆ ಮನ್ನಣೆ ಕೊಡುತ್ತೀರಿ ಎಂದು ನಂಬಿದ್ದೇನೆ. ಈಗಾಗಲೇ ಅನೇಕರು ಮಾತನಾಡಿರುವಂತೆ ಕಟ್ಟಡಗಳಿಲ್ಲದೇ ಅನೇಕ ಸ್ಕೂಲುಗಳು ನಡೆಯುತ್ತಾ ಇವೆ. ಮಲೆನಾಡಿನಲ್ಲಿ ಸಾಮಾನ್ಯವಾಗಿ ಮಳೆಗಾಲದಲ್ಲಿ ಮಳೆ ಹೆಚ್ಚಾಗಿ ಬರುತ್ತದೆ. ಅಲ್ಲಿ ಹುಲ್ಲುಜೋಪಡಿಗಳಲ್ಲಿ ಸ್ಕೂಲುಗಳನ್ನು ನಡೆಸುವುದಕ್ಕೆ ಆಗದೆ ಅನೇಕ ಸ್ಕೂಲುಗಳ ಉಪಾಧ್ಯಾಯರುಗಳು ಸುಮ್ಮನೆ ಮನೆಯಲ್ಲೇ ಇರಬೇಕಾಗುತ್ತದೆ. ಈ ರೀತಿ ಆದರೆ ಸರ್ಕಾರದವರ ಅಪ್ಪಣೆ ಮತ್ತು ಪ್ರಜೆಗಳ ಉದ್ದೇಶ ನೆರವೇರಿದಂತೆ ಆಯಿತೇ ಎಂದು ಕೇಳಬೇಕಾಗಿದೆ. ಮಲೆನಾಡಿನಲ್ಲಿ ಸಂಚಾರಮಾರ್ಗ ಇಲ್ಲದೆ ಒಂದು ಇಲಾಖೆಯ ಆಫೀಸರೂ ಕೂಡ ಸ್ಕೂಲುಗಳಿರತಕ್ಕ ಗ್ರಾಮಕ್ಕೆ ಭೇಟಿ ಕೊಡುವುದಕ್ಕೆ ಅವಕಾಶವಿರುವುದಿಲ್ಲ. ಈ ರೀತಿ ಕಾಡಿನ ಮಧ್ಯದಲ್ಲಿರತಕ್ಕ ಆ ಗ್ರಾಮಗಳ ಸ್ಕೂಲುಗಳಿಗೆ ಹೋಗಿ ಭೇಟಿ ಕೊಡುವುದಕ್ಕೆ ಆಗದೇ ಇರುವಾಗ ಆ ಸ್ಕೂಲುಗಳು ಎಷ್ಟುಮಟ್ಟಿಗೆ ನಡೆಯುತ್ತಾ ಇವೆ, ವಿದ್ಯಾಭ್ಯಾಸ ಎಷ್ಟುಮಟ್ಟಿಗೆ ಆಗುತ್ತಾ ಇದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಅವಕಾಶವಿಲ್ಲದೆ ಬಹಳ ದ್ರವ್ಯ ನಷ್ಟವಾಗುತ್ತಾ ಇದೆ ಎಂದು ಹೇಳುತ್ತೇನೆ. ಈ ಕಾರಣಗಳಿಂದ ಮಲೆನಾಡಿನಲ್ಲಿ ಹೆಚ್ಚು ಸ್ಕೂಲು ಕಟ್ಟಡಗಳನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಮೈದಾನದಲ್ಲಿ ವಿದ್ಯಾಭ್ಯಾಸಕ್ಕೆ ಎಷ್ಟರಮಟ್ಟಿನ ಪ್ರಾಮುಖ್ಯತೆ ಕೊಟ್ಟಿದ್ದೀರೋ, ಸೌಲಭ್ಯ, ಅನುಕೂಲತೆಗಳನ್ನು ಒದಗಿಸಿದ್ದೀರೋ, ಅಷ್ಟೇ ಪ್ರಾಮುಖ್ಯತೆ, ಸೌಲಭ್ಯ, ಅನುಕೂಲಗಳನ್ನು ಮಲೆನಾಡಿಗೆ ಕೊಟ್ಟಿಲ್ಲ; ಮಲೆನಾಡಿನ ವಿದ್ಯಾಭ್ಯಾಸದ ಸೌಕರ್ಯಗಳಿಗೂ ಮೈದಾನದ ಸೌಕರ್ಯಗಳಿಗೂ ಬಹಳ ತಾರತಮ್ಯವಿದೆ ಎಂದು ನನಗೆ ತಿಳಿದಿರುವಮಟ್ಟಿಗೆ ಈ ಸಂದರ್ಭದಲ್ಲಿ ತಿಳಿಸಲು ಬಯಸುತ್ತೇನೆ. ಮಲೆನಾಡಿನಲ್ಲಿ ವರ್ಷದಲ್ಲಿ ಸುಮಾರು ಆರು ತಿಂಗಳು ಸೂರ್ಯನನ್ನೇ ಕಾಣುವುದು ಕಷ್ಟ. ಸೂರ್ಯನನ್ನು ಕಾಣದೇ ಮಳೆ ಹೆಚ್ಚಾಗಿದ್ದು ಜನನಂಚಾರಕ್ಕೆ ಅವಕಾಶವಿಲ್ಲದೆ ಅನೇಕ ಸ್ಥಳಗಳಲ್ಲಿ ಸೇತುವೆಗಳಿಲ್ಲದೆ, ಒಂದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ ಹೋಗಲು ಬಹಳ ತೊಂದರೆಯಾಗಿದೆ. ಈ ಕಾರಣಗಳಿಂದ ಹೆಚ್ಚಿನ ಗ್ರಾಂಟನ್ನು ಮಲೆನಾಡಿನ ಸ್ಕೂಲುಗಳಿಗೆ ಮತ್ತು ಕಟ್ಟಡಗಳಿಗೆ ಬಡ್ಜೆಟ್‌ನಲ್ಲಿ ಪ್ರೊವೈಡ್‌ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ವಿದ್ಯಾರ್ಥಿವೇತನಗಳ ವಿಷಯವನ್ನು ತೆಗೆದುಕೊಂಡರೆ ಮಲೆನಾಡಿನಲ್ಲಿ ಈಗ ವಿಶೇಷವಾಗಿ ವಿದ್ಯಾರ್ಥಿಗಳು ವ್ಯಾಸಂಗಮಾಡುತ್ತಾ ಇದ್ದಾರೆ. ಅಷ್ಟು ಜನ ವಿದ್ಯಾರ್ಥಿಗಳಲ್ಲಿ ಕೊನೆಯ ಪಕ್ಷ $\frac{1}{4}$ ಭಾಗದ ವಿದ್ಯಾರ್ಥಿಗಳಿಗೂ ಕೂಡ ವಿದ್ಯಾರ್ಥಿವೇತನ ಸಿಕ್ಕುತ್ತಾ ಇಲ್ಲ. ಈಗಾಗಲೇ ನಮ್ಮ ವಿದ್ಯಾಸಚಿವರು ನಮ್ಮ ಅನೇಕ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ ನಿಮ್ಮವರ್ಗದವರಿಗೆ ಉಚಿತವಾಗಿ ಪ್ರೈಮರಿ ಸ್ಕೂಲುಗಳಲ್ಲಿ ಪುಸ್ತಕಗಳು ಮತ್ತು ಸ್ಲೇಟುಗಳನ್ನು ಕೊಡಲಾಗುತ್ತಿದೆ ಎಂದು ಹೇಳಿದ್ದಾರೆ. ಎಷ್ಟು ಸ್ಕೂಲುಗಳಿಗೆ, ಎಷ್ಟು ಜನ ವಿದ್ಯಾರ್ಥಿಗಳಿಗೆ ಈ ರೀತಿ ಉಚಿತವಾಗಿ ಸ್ಲೇಟ್ ಪುಸ್ತಕ ಕೊಡುತ್ತಾ ಇದ್ದಾರೆ ಎಂಬುದನ್ನು ಈ ಮಾನ್ಯ ಸಭೆಯ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಂಸ್ಥಾನಕ್ಕೆಲ್ಲಾ ಕೇವಲ 3 ಸಾವಿರ ರೂಪಾಯಿಗಳನ್ನು ಪುಸ್ತಕ, ಬಟ್ಟೆ, ಬಳಪ ಇತ್ಯಾದಿಗಳಿಗಾಗಿ ಕೊಟ್ಟರೆ ಸಾಕೇ ಎಂಬುದನ್ನು ನಾನು ಕೇಳುತ್ತೇನೆ. ಯಾವಾಗಲೂ ಒಂದು ಸರಿಯಾದ ಅಂದಾಜುಮಾಡಿ ಕೊಟ್ಟಂಥ ಒಂದು ಗ್ರಾಂಟನ್ನು ಮುಂದುವರಿಸಿಕೊಂಡು ಬರುವುದಕ್ಕೂ ಕೂಡ ಯೋಚನೆ ಮಾಡಬೇಕಾಗಿದೆ. ರೀಡಿಂಗ್ ರೂಂ ಮತ್ತು ಲೈಬ್ರೆರಿ ಫೀಜಿಗೆ ಅನೇಕ ಸಂದರ್ಭಗಳಲ್ಲಿ (exempt) ಮಾಫಿ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಈಗ ನಿಮ್ಮ ತರಗತಿಯ ಎಷ್ಟು ವಿದ್ಯಾರ್ಥಿಗಳಿಗೆ exemption ಸಿಕ್ಕಿದೆ ಎಂಬತಕ್ಕದ್ದನ್ನು ನೋಡಿದರೆ ಅದೂ ಕೂಡ ಬಹಳ ಕಡಮೆ. ಹೀಗಿರುವಾಗ ಹರಿಜನರಿಗೆ ಬೇಕಾದಷ್ಟು ವಿದ್ಯಾಭ್ಯಾಸ ಸೌಕರ್ಯ ಕೊಟ್ಟಿದ್ದೇವೆ, ವಿದ್ಯಾರ್ಥಿನಿಲಯಗಳನ್ನು ಅನೇಕಕಡೆ ಸ್ಥಾಪಿಸಿದ್ದೇವೆ, ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಕೊಡುತ್ತಾ ಇದ್ದೇವೆ ಎಂದು ಈ ಮಾನ್ಯ ಸಭೆಯಲ್ಲಿ ಸರ್ಕಾರದವರು ಏನು ಹೇಳುತ್ತಾರೋ ಅದು ಬರೀ ಹೇಳುವ ಭಾವನೆಯಿಂದ ಕೇಳುವವರಿಗೆ ಒಂದು ತೃಪ್ತಿಯನ್ನುಂಟುಮಾಡಲು ಸಹಕಾರವಾಗುತ್ತದೆ. ಅಷ್ಟೇ ಸಾಲದು; ಬಾಯಲ್ಲಿ ಹೇಳುವ ವಿಚಾರವನ್ನು ಕಾರ್ಯತಃ ಮಾಡಿಕೊಡಬೇಕು ಎಂದು ಹೇಳುತ್ತೇನೆ. ಎಷ್ಟೋಜನ ವಿದ್ಯಾರ್ಥಿಗಳು ಅನುಕೂಲವಿಲ್ಲದೆ ವಿದ್ಯಾಭ್ಯಾಸ ಮಾಡುವುದನ್ನು ಬಿಟ್ಟು ಬೀದಿ ಭಿಕಾರಿಗಳಾಗಿದ್ದಾರೆ. ಅವರನ್ನು ಮೇಲಕ್ಕೆ ಎತ್ತುವುದು ಸರ್ಕಾರದವರ ಕರ್ತವ್ಯವಲ್ಲವೇ? ಈಗ ಯಾವರೀತಿ ಆಗುತ್ತಾ ಇದೆ ಎಂಬುದನ್ನು ಪರಿಶೀಲನೆ ಮಾಡಿ ಒಂದು ಪಟ್ಟಿ ತಯಾರಿಸಿ ನಿಮ್ಮವರ್ಗದವರು ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸುವುದಕ್ಕೆ ಅನುಕೂಲವಾಗುವಂತೆ ಮಾಡಲು ಕೊನೆಪಕ್ಷ ಮೆಟ್ರಿಕ್ಯುಲೇಷನ್‌ವರೆಗಾದರೂ ವಿದ್ಯಾರ್ಥಿನಿಲಯಗಳನ್ನು ಏರ್ಪಡಿಸಿ ಉಚಿತವಾಗಿ ಅವರಿಗೆ ಸೌಕರ್ಯಗಳನ್ನೇರ್ಪಡಿಸಿ ಕೊಡಬೇಕು. ಈ ರೀತಿ ಪ್ರತಿ ತಾಲ್ಲೂಕಿನಲ್ಲಿ, ಪ್ರತಿ ಹೋಬಳಿ ಹೆಡ್‌ಕ್ವಾರ್ಟರಿನಲ್ಲಿ ಕೆಲವು ವರ್ಷ ಅಥವ ಒಂದು ಗೊತ್ತಾದ ಅವಧಿಯವರೆಗೆಯಾದರೂ ಆದರೂ ಏರ್ಪಾಡುಮಾಡಿದರೆ ಅನುಕೂಲವಾಗುತ್ತ

ದೆಯೇ ವಿನಃ ನುಮ್ಮನೆ ಒಂದು ಯೋಜನೆ ತಯಾರು ಮಾಡಿಕೊಂಡು ವಿದ್ಯಾಭ್ಯಾನಕ್ಕೆ 4 ಕೋಟಿಗೂ ಮೇಲ್ಪಟ್ಟು ಖರ್ಚುಮಾಡುತ್ತೇವೆ ಎಂದು ಹೇಳುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅವಿದ್ಯಾವಂತರ ಸಂಖ್ಯೆ ಹೆಚ್ಚಿ ದೇಶ ಮುಂದುವರಿಯುವುದಕ್ಕೆ ಅನಾನುಕೂಲವಾಗುತ್ತದೆ ಎಂದು ಈ ಸಮಯದಲ್ಲಿ ಹೇಳುತ್ತೇನೆ. ಆದ್ದರಿಂದ ವಿದ್ಯಾಭ್ಯಾನಕ್ಕೆ ಮೀಸಲಾಗಿಟ್ಟಿರತಕ್ಕ ಗ್ರಾಂಟಿನ ಪೈಕಿ ಯಾವ ಯಾವ ಭಾಗದಲ್ಲಿ ಈ ಜನಾಂಗದವರಿಗೆ ಸೌಲಭ್ಯಗಳನ್ನೊದಗಿಸಬೇಕೋ ಅಯಾ ಭಾಗಕ್ಕೆ ಹೆಚ್ಚಿನ ಹಣ ಒದಗಿಸಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಹೈಸ್ಕೂಲು ಮತ್ತು ಯೂನಿವರ್ಸಿಟಿ ವಿದ್ಯಾಭ್ಯಾಸದ ವಿಚಾರವನ್ನು ತೆಗೆದುಕೊಂಡರೆ ವ್ಯಾಸಂಗಮಾಡತಕ್ಕ ವಿದ್ಯಾರ್ಥಿಗಳ ಸಂಖ್ಯೆ ನಮ್ಮ ಪ್ರಜಾನಂಖ್ಯೆಗನುಗುಣವಾಗಿಲ್ಲ. ಬಹಳ ಕಡಮೆಯಾಗಿದೆ. ಈ ರೀತಿ ಕಡಮೆಯಾಗಿ ಇದ್ದರೂ ಕೂಡ ಎಷ್ಟು ಗ್ರಾಂಟುಗಳನ್ನು ಒದಗಿಸಬೇಕೋ ಅಷ್ಟು ಒದಗಿಸುತ್ತಾ ಇಲ್ಲ ಎಂಬುದನ್ನು ವಿಷಾದದಿಂದ ಹೇಳುತ್ತೇನೆ. ಆದ್ದರಿಂದ ನಿಮ್ಮ ವರ್ಗದವರ ಪ್ರಜಾನಂಖ್ಯೆಗನುಗುಣವಾಗಿ ದೇಶಾದ್ಯಂತ ವಿದ್ಯಾರ್ಥಿನಿಲಯಗಳಿಗೂ ಎಷ್ಟು ಗ್ರಾಂಟ್ ಕೊಡುತ್ತಿದ್ದೀರೋ ಮತ್ತು ವಿದ್ಯಾರ್ಥಿವೇತನಕ್ಕಾಗಿ ಎಷ್ಟು ಹಣ ಒದಗಿಸುತ್ತೀರೋ ಅದರಲ್ಲಿ ರೆಕ್ಯಾಚಾರ ಹಾಕಿ ದಾಮಾಷಾ ಪ್ರಕಾರ ಗ್ರಾಂಟು ಕೊಡಬೇಕೆಂದು ಹೇಳುತ್ತೇನೆ ಮತ್ತು 1954-55ನೇ ಸಾಲಿನ ಬಡ್ಜೆಟ್ ನಲ್ಲೇ ಈ ಭಾಗಕ್ಕೆ ಹೆಚ್ಚು ಹಣ ಒದಗಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತೀರೆಂದು ನನಗೆ ನಂಬಿಕೆ ಇದೆ. ಈ ಸಭೆಯಲ್ಲಿರುವ 19 ಜನ ನಿಮ್ಮ ವರ್ಗದ ಸದಸ್ಯರ ಅಭಿಪ್ರಾಯ ಮತ್ತು ಇತರ ಹಲವು ಮಾನ್ಯ ಸದಸ್ಯರ ಅಭಿಪ್ರಾಯ ಸಹ ಇದೇರೀತಿಯಿದೆಯೆಂಬುದು ವ್ಯಕ್ತವಾಗಿದೆ. ಆದ್ದರಿಂದ ವಿದ್ಯಾಭ್ಯಾಸಕ್ಕೆ ಸೌಕರ್ಯವನ್ನೊದಗಿಸುವಾಗ ವಿದ್ಯಾರ್ಥಿವೇತನಗಳನ್ನು ಹೆಚ್ಚಿಸುವುದಕ್ಕೂ ಮತ್ತು ವಿದ್ಯಾಭ್ಯಾಸದ ಇತರ ಸೌಲಭ್ಯಗಳನ್ನು ನೀಡುವುದಕ್ಕೂ ಯಾವ ಸದಸ್ಯರಲ್ಲೂ ಭಿನ್ನಾಭಿಪ್ರಾಯವಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅದರಂತೆ ಎಲ್ಲ ಸದಸ್ಯರ ಅಭಿಪ್ರಾಯವನ್ನೂ ದೇಶದ ಅಭಿವೃದ್ಧಿ ದೃಷ್ಟಿಯಿಂದ ನೆರವೇರಿಸಿಕೊಡುವುದಾಗಿ ಮಾನ್ಯ ಮಂತ್ರಿಗಳು ಭರವಸೆ ಕೊಡುತ್ತಾರೆಂದು ನಂಬಿ ಈ ಖೋತಾ ನಿರ್ಣಯವನ್ನು ಪುಷ್ಕೀಕರಿಸುತ್ತೇನೆ. ಮಾನ್ಯ ಅಧ್ಯಕ್ಷರು ಇಷ್ಟು ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ಮತ್ತೊಮ್ಮೆ ಕೃತಜ್ಞತೆಯನ್ನು ನಲ್ಲಿಸುತ್ತೇನೆ.

*ಶ್ರೀ ಏ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾಶಾಖೆಯ ಸಚಿವರು).—ಸ್ಪಾಮಿ, ಶ್ರೀ ಮಾದಯ್ಯನವರು ಈ ಕತ್ತರಿ ನಿರ್ಣಯವನ್ನು ಪ್ರಾರಂಭಿಸುವಾಗ ಬಹಳ ವಿನಯದಿಂದ ಮತ್ತು ಒತ್ತಾಯದಿಂದ ತಾವು ಈ ನಿರ್ಣಯವನ್ನು ಮಂಡಿಸುವುದಾಗಿ ಹೇಳಿದರು. ಅಷ್ಟೇ ವಿನಯದಿಂದ ಇನ್ನೂ ಹೆಚ್ಚಾದ ಅಂಕಿ ಅಂಶಗಳ ಆಧಾರದಿಂದ ಅವರ ಹೇಳಿಕೆಗೆ ನಾನು ಜವಾಬು ಕೊಡುವುದಕ್ಕೆ ಇಷ್ಟಪಡುತ್ತೇನೆ. ಅವರು ಮಾತನಾಡುವಾಗ ಈ ನಿರ್ಣಯಕ್ಕೆ ಸಂಬಂಧಪಟ್ಟಿರುವ ವಿಷಯಗಳೇ ಅಲ್ಲದೆ ಬೇರೆ ವಿಷಯಗಳು ಕೂಡ ಅನೇಕವು ನಿರೂಪಿಸಲ್ಪಟ್ಟಿವೆ. ಆದರೆ ಜವಾಬು ಹೇಳುವಾಗ್ಗೆ ಈ ನಿರ್ಣಯಕ್ಕೆ ಸಂಬಂಧಪಟ್ಟ ವಿಷಯಗಳನ್ನು ಮಾತ್ರ ಈ ಸಭೆಯ ಮುಂದಿಡುವುದಕ್ಕೆ ಪ್ರಯತ್ನಪಡುತ್ತೇನೆ. ಮಾನ್ಯ ಸದಸ್ಯರು ಮಾತನಾಡುವಾಗ ರಾಜ್ಯಾಂಗಕ್ಕೆ ವಿರೋಧವಾಗಿ ವರ್ತಿಸುತ್ತಿದ್ದಾರೆಂದು ಹೇಳಿರುವುದು ಅರ್ಥವಾಗಲಿಲ್ಲ, ಇನ್ನೂ ಅರ್ಥಮಾಡಿಕೊಳ್ಳುವುದಕ್ಕೆ ಪ್ರಯತ್ನಪಡುತ್ತಿದ್ದೇನೆ. ಸಾಮಾನ್ಯವಾಗಿ ಹೇಳಬೇಕಾದರೆ ಇತರ ಯಾವ ದೇಶಕ್ಕೂ ಕೂಡ ಆದಿಕರ್ನಾಟಕರ ಪುರೋಭಿವೃದ್ಧಿ ವಿಚಾರದಲ್ಲಿ ಮೈಸೂರು ದೇಶ ಹಿಂದೆ ಬಿದ್ದಿಲ್ಲ. ಹೈದರಾಬಾದು, ಬೊಂಬಾಯಿ ಇತ್ಯಾದಿ ದೇಶಗಳ ಸ್ಥಿತಿಗತಿ ನೋಡಿದ್ದೇನೆ. ವಿದ್ಯಾರ್ಥಿವೇತನ, ಹಾಸ್ಟೆಲ್ ಮುಂತಾದುವನ್ನು ಇತರ ಸಂಸ್ಥಾನಗಳಿಗಿಂತ ನಾವು ಹೆಚ್ಚಾಗಿ ಒದಗಿಸಿದ್ದೇವೆ. ನನಗಾದರೂ ಗೊತ್ತಿರುವ ಹಾಗೆ ಇದು ಯಾವ ಇತರ ಸಂಸ್ಥಾನಕ್ಕೂ ಕೂಡ ಯಾವ ವಿಧದಲ್ಲೂ ಹಿಂದೆ ಬಿದ್ದಿಲ್ಲ, ಮುಂದುವರಿದಿದೆ ಎಂದು ನಾನು ಈ ಸಭೆಗೆ ತಿಳಿಸಲು ಸಿದ್ಧನಾಗಿದ್ದೇನೆ.

ಇಲ್ಲಿನ ವಿದ್ಯಾರ್ಥಿವರ್ಗ ತೆಗೆದುಕೊಂಡರೆ ಅವರಿಗಿರುವ ಅನುಕೂಲತೆಗಳೇನೆಂಬುದನ್ನು ' ನೋಡಬಹುದು. ನಾನು ಮೊದಲೇ ಅರಿಕೆ ಮಾಡಿಕೊಂಡ ರೀತಿಯಲ್ಲಿ ಪ್ರೈಮರಿ ಸ್ಕೂಲಿನ ಮೊದಲನೆಯ ಕ್ಲಾಸಿನಿಂದ ಹಿಡಿದು ಎಷ್ಟು ದಿವಸ ಯಾವ ಸ್ಕೂಲು ಅಥವಾ ಕಾಲೇಜಿನಲ್ಲಿ ಓದಿದರೂ ಒಂದು ಕಾಸೂ ಶುಲ್ಕವಿಲ್ಲದಂತೆ ಎಲ್ಲ ಕಡೆಗೂ ವಿನಾಯಿತಿ ಕೊಟ್ಟಿರುವುದನ್ನು ಸಭಿಕರು ಗಮನಕ್ಕೆ ತೆಗೆದುಕೊಳ್ಳಬೇಕೆಂದು ವಿನಯಪೂರ್ವಕವಾಗಿ ಹೇಳುತ್ತೇನೆ, ಜೊತೆಗೆ ಈ ಠರಾವಿನಲ್ಲಿ "to urge the need for providing adequate number of B. C. Scholarships to the Scheduled Caste Students" ಎಂದು ಹೇಳಿದ್ದಾರೆ. Adequate number ಎಂಬುದನ್ನು ನಿರ್ಣಯಮಾಡುವುದು ಬಹಳ ಕಷ್ಟ. ಆದರೂ ಅಂಕಿ ಅಂಶಗಳನ್ನು ಈ ದಿವಸ ಒಂದು ಪ್ರಶ್ನೆಗೆ ಕೊಟ್ಟಿರುವ ಉತ್ತರದ ರೀತ್ಯಾ ನೋಡಿದರೆ 1949-50 ರಲ್ಲಿ ಈ ವರ್ಷ ಹೈಸ್ಕೂಲಿನಲ್ಲಿ ಎಷ್ಟು ಅರ್ಜಿಗಳು ಬಂದಿವೆಯೋ ಸಾಮಾನ್ಯವಾಗಿ ಅವುಗಳ 1/3 ಭಾಗದ ಅರ್ಜಿಗಳಿಗೆ ಪುರಸ್ಕಾರ ಕೊಟ್ಟು ವಿದ್ಯಾರ್ಥಿವೇತನ ಕೊಟ್ಟಿರುವುದು ರೇಷಿಯೋದಿಂದ ಸ್ಪಷ್ಟವಾಗುತ್ತದೆ. 1952-53ರಲ್ಲಿ ಅರ್ಜಿಗಳ ಸಂಖ್ಯೆ ಕೊಟ್ಟಿರುವ ವಿದ್ಯಾರ್ಥಿಗಳ ಸಂಖ್ಯೆ ತೆಗೆದುಕೊಂಡರೂ 1/3 ಭಾಗದ ಪ್ರಪೋರ್ಷನ್ ಮುಂದುವರಿದುಕೊಂಡು ಬರುತ್ತಿರುವುದು ಸ್ಪಷ್ಟವಾಗುತ್ತದೆ. 1953-54ನೆಯ ಸಾಲಿನ ಅಂಕಿ ಅಂಶ ತೆಗೆದುಕೊಂಡು ಏನು ಮಾಡಬೇಕೆಂಬುದನ್ನು ಮುಂದಿನ ವರ್ಷ ನೋಡಿ ನಿಷ್ಕರ್ಷೆ ಮಾಡುವುದಕ್ಕೆ ಅವಕಾಶವಿದೆ. ಇನ್ನೂ ಆ ಅಂಕಿ ಅಂಶ ಬಂದಿಲ್ಲ, ಸಾಕಷ್ಟು ಕಾಲಾವಕಾಶವಿದೆ ಎಂದು ವಿನಂತಿ ಮಾಡುತ್ತೇನೆ. ಇದೇ ರೀತಿಯಲ್ಲಿ ಮಿಡ್ಲ್ ಸ್ಕೂಲಿನಲ್ಲಿ 1949-50ರಲ್ಲಿ 4,304 ಅರ್ಜಿಗಳು ಬಂದು 799 ಜನರಿಗೆ ವಿದ್ಯಾರ್ಥಿವೇತನ ಸಿಕ್ಕಿ 1/5 ಭಾಗದವರಿಗೆ ಸಿಕ್ಕಿದಂತಾಗಿದೆ. 1952-53ರ ರಲ್ಲಿ 4,493 ವಿದ್ಯಾರ್ಥಿಗಳು ಅರ್ಜಿ ಹಾಕಿದಾಗ 899 ಜನರಿಗೆ ಸಿಕ್ಕಿದೆ. ಅದು 1/5 ಭಾಗದ ರೇಷಿಯೋವಿಗೆ ವರ್ಕೌಟ್ ಆಗುತ್ತದೆ. ಹಿಂದಿನಂತೆಯೂ 1954-55ರಲ್ಲೂ ಹೈಸ್ಕೂಲು ಮತ್ತು ಮಿಡ್ಲ್ ಸ್ಕೂಲುಗಳಲ್ಲಿ ಅರ್ಜಿ ತೆಗೆದುಕೊಂಡು ಆ ಪ್ರಪೋರ್ಷನ್ ಕಾಪಾಡಲು ಎಷ್ಟು ಹೆಚ್ಚಿಸಬೇಕೆಂಬುದನ್ನು ಖಂಡಿತ ಗಮನಿಸುತ್ತೇವೆಂಬುದನ್ನು ನಾನು ಹೇಳಬಯಸುತ್ತೇನೆ.

ವರ್ಷೇ ವರ್ಷೇ 72,490 ರೂಪಾಯಿಗಳನ್ನೇ ಕೊಡುತ್ತೀರೆಂದು ಹೇಳಿದರು. ಹೆಚ್ಚು ಹುಡುಗರು ಬರುವಾಗ ಪ್ರಪೋರ್ಷನ್ ಏನಿದೆಯೋ ಅದನ್ನು ಬಹುಶಃ ಹೆಚ್ಚಿಸಲು ಪ್ರಯತ್ನ ಮಾಡಿದ್ದೇವೆ. ಹುಡುಗರು ಜಾಸ್ತಿಯಾಗುತ್ತಿರುವುದು ನಿಜ, ಅವರಿಗೆ ಕೊಡುವ ವಿದ್ಯಾರ್ಥಿವೇತನ ಅನೇಕ ವರ್ಷಗಳಿಂದ 7½ ರೂಪಾ

(ಶ್ರೀ ಎ. ಜಿ. ರಾಮಚಂದ್ರರಾವ್.)

ಯಿಗಳಿರುವುದೂ ನಿಜ. ಆ 7½ ರೂಪಾಯಿಗಳನ್ನು ಹೆಚ್ಚಿಸುವ ಅವಶ್ಯಕತೆ ಕಂಡರೂ ಹಣದ ಮುಗ್ಗಟ್ಟಿನಿಂದ ಹೆಚ್ಚಿಸುವುದಕ್ಕಾಗಿಲ್ಲವೆಂಬುದು ಅವರಿಗೂ ನನಗೂ ಗೊತ್ತು. ಆದರೂ 20 ಲಕ್ಷ ರೂಪಾಯಿಗಳನ್ನು ಎಜುಕೇಷ್ನ್ ಬಜೆಟ್ಟಿನಲ್ಲಿ ಹೆಚ್ಚಿಸಿದ್ದಾರೆ. ಅದನ್ನೇತಕ್ಕೆ ಖರ್ಚು ಮಾಡುತ್ತಾರೋ ಗೊತ್ತಿಲ್ಲ. ವಿದ್ಯಾರ್ಥಿವೇತನವನ್ನು ಜಾಸ್ತಿ ಮಾಡಬೇಕೆಂದು ಹೇಳುವಾಗ ಈ 20 ಲಕ್ಷ ರೂಪಾಯಿಗಳು ಜಾಸ್ತಿ ಹೇಗಾಯಿತೆಂಬುದನ್ನು ವಿವರಿಸುವುದು ಬಹಳ ಅವಶ್ಯಕ. ಈಗ ಉಪಾಧ್ಯಾಯರುಗಳಿಗೆ ಕೊಡುವ ಸಂಬಳ ಇತರ ದೇಶಗಳಿಗಿಂತಲೂ ಕಡಮೆ, ಜಾಸ್ತಿ ಯಾಗಬೇಕಾದ್ದು ಆವಶ್ಯಕ ಎಂದು ಎಲ್ಲರೂ ಒತ್ತಾಯ ಮಾಡುತ್ತಿದ್ದಾರೆ. ಜಾಸ್ತಿ ಮಾಡುವುದಕ್ಕಾಗಿದ್ದ ದ್ದರೂ ಅವರಿಗಿರುವ 1, 2 ಮತ್ತು 3 ರೂಪಾಯಿಗಳ ಗ್ರೇಡುಗಳನ್ನು ಕೊಡಬೇಕಾಗಿದೆ. ಒಂದು ರೂಪಾಯಿ ಜಾಸ್ತಿಯಾದರೂ ಒಟ್ಟು 2½ ಲಕ್ಷ ರೂಪಾಯಿಗಳು ಹೆಚ್ಚುತ್ತವೆ. ಆದ್ದರಿಂದ ಕೊಟ್ಟಿರುವ ಗ್ರೇಡನ್ನು ಮುಂಜೂರುಮಾಡಿಕೊಡುವುದಕ್ಕೆ ಹತ್ತಾರು ಲಕ್ಷ ಬೇಕಾಗುತ್ತದೆಂಬುದನ್ನು ಗಮನಿಸಬೇಕು. ಎರಡನೆಯದಾಗಿ ಸಾಮಾನ್ಯವಾಗಿ ಹಳ್ಳಿಯ ಸ್ಕೂಲುಗಳು ಅನೇಕವಾಗಿವೆ. ಅವಕ್ಕೆ ಬೇಕಾದ ಸಲಕರಣೆಗಳಿಲ್ಲ, ಹುಡುಗರಿಗೆ ಸ್ಲೇಟು ಪುಸ್ತಕಗಳಿಲ್ಲ, ಸೀಟುಗಳಿಲ್ಲ ಎಂದು ಹೇಳುವುದು ತಮಗೆ ಗೊತ್ತಿಪೆ. ಆದರೂ ವಿದ್ಯಾಭ್ಯಾಸಕ್ಕೆ ಹೆಚ್ಚಾಗಿ ಅವಕಾಶ ಮಾಡಬೇಕೆಂಬ ದೃಷ್ಟಿಯಿಂದ ಅನುಕೂಲತೆಗಳನ್ನು ಸ್ವಲ್ಪ ಜಾಸ್ತಿ ಮಾಡಿದೆ. 13 ಸಾವಿರ ಜನ ಉಪಾಧ್ಯಾಯರಿಗೆ ಕೊಟ್ಟಿರುವ ಗ್ರೇಡಿಗನುಗುಣವಾಗಿ ಹಣ ಬೇಕಾಗುವುದರಿಂದ 20 ಲಕ್ಷ ಒದಗಿಸಿದ್ದಾರೆಂಬುದನ್ನು ಗಮನಿಸಬೇಕು. ಏಕೆ ಜಾಸ್ತಿಯಾಯಿತೆಂಬುದಕ್ಕೆ ಇಷ್ಟು ಹೇಳಬೇಕಾಯಿತು. ಈ ವರ್ಷ ಬಜೆಟ್‌ನಲ್ಲಿರುವ ಕೊರತೆಯನ್ನು ಸರಿತೂಗಿಸಲು ಯಾವ ರೀತಿ ಖರ್ಚನ್ನು ಕಡಮೆ ಮಾಡಬೇಕೆಂಬುದನ್ನು ನೋಡುತ್ತಿದ್ದೇವೆ. ಜಾಸ್ತಿ ತೆರಿಗೆಯ ಮಸೂದೆಗಳು ತಮ್ಮ ಮುಂದಿವೆ. ಅದರಿಂದ ಬರುವ ವರಮಾನವನ್ನು ನೋಡಿ ಎಷ್ಟು ವಿದ್ಯಾರ್ಥಿನಿಲಯಕ್ಕೆ ಹೆಚ್ಚಿದೆಯೆಂಬುದನ್ನು ನೋಡಿ ವಿದ್ಯಾಭ್ಯಾಸ ಸೌಕರ್ಯವನ್ನು ಉತ್ತಮಪಡಿಸಲು ಪೂರ್ಣ ಪ್ರಯತ್ನ ಮಾಡುತ್ತೇವೆಂದು ಭರವಸೆಕೊಡುತ್ತೇನೆ. ಶ್ರೀ ಮಾದಯ್ಯನವರು ಮತ್ತು ಮಾನ್ಯ ಮಿತ್ರರು ನಿರಾಶರಾಗಬಾರದು, ಸಾಧ್ಯವಾದಷ್ಟು ಪ್ರಯತ್ನ ಮಾಡೋಣ ಎಂದು ವಿನಂತಿ ಮಾಡಿ ಈ ನಿರ್ಣಯವನ್ನು ಪಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎ. ಮಾದಯ್ಯ.—ನನ್ನ ಖೋತಾ ಸೂಚನೆಯನ್ನು ಪಾಪಸು ತೆಗೆದುಕೊಳ್ಳಲು ಅನುಮತಿ ಬೇಡುತ್ತೇನೆ.

The cut motion was, by leave, withdrawn.

Mr. SPEAKER.—Next cut motion, either 20 or 21 may be moved by Sri G. Puttaswamy.

Girls' High School at Chikmagalur.

Sri G. PUTTASWAMY.—I beg to move:

> "That the demand under the head '37. Education' for Rs. 3,77,90,000 be reduced by Rs. 100 (to raise a debate on the need for starting a Girls' High School at Chikmagalur.)"

ಸಭಾಪತಿಗಳೇ, ಸ್ವಾಮಿ, ಈ ಖೋತಾ ನಿರ್ಣಯವನ್ನು ಮಾನ್ಯ ಸಭೆಯ ಮುಂದೆ ಮಂಡಿಸುತ್ತಾ ಬಹಳ ವರ್ಷಗಳಿಂದ ಬಾಲಕಿಯರ ಹೈಸ್ಕೂಲಿಲ್ಲದೆ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರೂ ಸಹ ಒಟ್ಟಿಗೆ ವಿದ್ಯಾಭ್ಯಾಸ ಮಾಡುತ್ತಾ ಅನೇಕ ಅನಾನುಕೂಲಗಳಿಗೆ ಗುರಿಯಾಗಿರುತ್ತಾರೆಂದು ಹೇಳದೆ ವಿಧಿಯಿಲ್ಲ. ಈಗಾಗಲೇ Joseph Convent Schoolನಲ್ಲಿ 200 ಜನಗಳಿಗೆ ಮೇಲ್ಪಟ್ಟು ಒಂದೇ ಹೈಸ್ಕೂಲಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ಅನೇಕ ಮನವಿಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆಂದು ತಿಳಿಯುತ್ತೇನೆ. ಮರೆನಾಡಿನ ಕೇಂದ್ರವಾದ ಚಿಕ್ಕಮಗಳೂರು ಜಿಲ್ಲಾ ಕೇಂದ್ರ; ಈ ಕೇಂದ್ರದಲ್ಲಿ ಬಾಲಕಿಯರ ಹೈಸ್ಕೂಲನ್ನು ಸ್ಥಾಪನೆ ಮಾಡುವುದು ಅಗತ್ಯವೆಂದು ಸರ್ಕಾರಕ್ಕೆ ಕಂಡು ಬಂದಿದೆಯೆಂದು ತಿಳಿದುಬಂದಿದೆ. ಆದರೂ ಏಕೋ ಇದನ್ನು ನಿಧಾನ ಮಾಡಿದ್ದಾರೆ. ಈ ವರ್ಷವಾದರೂ ಈ ಬಾಲಕಿಯರ ಹೈಸ್ಕೂಲನ್ನು ಸ್ಥಾಪಿಸಲು ಹಣ ಒದಗಿಸಿ ಇದನ್ನು ಮುಂಜೂರುಮಾಡುತ್ತಾರೆ ಎಂದು ನಾನು ನಿರೀಕ್ಷಿಸಿದ್ದೇನೆ. ಇದೇ ಸಂದರ್ಭದಲ್ಲಿ ಇಲ್ಲಿ ಒಂದು ಕಾಲೇಜು ಕಟ್ಟಡ ಕಟ್ಟುವುದಕ್ಕಾಗಿ ಸುಮಾರು 95 ಸಾವಿರ ರೂಪಾಯಿಗಳನ್ನು ಸಾರ್ವಜನಿಕರು ವಸೂಲು ಮಾಡಿ ಯೂನಿವರ್ಸಿಟಿ ಫಂಡಿಗೆ ಜಮಾಮಾಡಿರುತ್ತಾರೆ. ಈ ರೀತಿ ಹಣ ಜಮಾ ಮಾಡಿದ್ದರೂ ಕಟ್ಟಡ ಕಟ್ಟಲು ಸರ್ಕಾರ ಮನಸ್ಸು ಮಾಡಿಲ್ಲ, ಈ ಕಟ್ಟಡದ ಅವಶ್ಯಕತೆಯನ್ನು ಮನಗಂಡು ಸ್ಕೂಲನ್ನು ಸ್ಥಾಪನೆ ಮಾಡುತ್ತಾರೆಂದು ನಂಬುತ್ತೇನೆ. ಅಲ್ಲದೆ ಚಿಕ್ಕಮಗಳೂರಿನಲ್ಲಿ ಒಂದೇ ಒಂದು ಮಿಡಲ್ ಸ್ಕೂಲು ಬೋರ್ಡಿಂಗ್ ಹೋಂ ಇದೆ. ಅದು ಕೇವಲ 40 ವಿದ್ಯಾರ್ಥಿಗಳಿಗೆ ಮಾತ್ರ ವಿದ್ಯಾಭ್ಯಾಸ ಮಾಡಲು ಮಾಪಾರ್ ಡಾಗಿದೆ. ಬೇರೆ ಜಿಲ್ಲೆಗಳಿಗೆ ಮತ್ತು ಮೈದಾನ ಪ್ರದೇಶಕ್ಕೆ ಹೋಲಿಸಿದರೆ ಕೆಲವು ಜಿಲ್ಲೆಗಳಲ್ಲಿ 50—60 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಗ್ರಾಂಟನ್ನು ಕೊಟ್ಟಿರುವಾಗ ಕೇವಲ 3 ಸಾವಿರ ರೂಪಾಯಿಗಳನ್ನು ಮಾತ್ರ ಚಿಕ್ಕಮಗಳೂರಿಗೆ ಖರ್ಚು ಮಾಡುತ್ತಿದ್ದಾರೆ. ಇಲ್ಲಿ ವಿದ್ಯಾರ್ಥಿಗಳಾದರೋ ದಿನೇ ದಿನೇ ಹೆಚ್ಚುತ್ತಾ ಇದ್ದಾರೆ. ಮರೆನಾಡಿನ ಆ ಪ್ರದೇಶದಲ್ಲಿ ಹಿಂದುಳಿದ ಬಡವರು ಅನೇಕವಾಗಿದ್ದು ಅವರ ಮಕ್ಕಳಿಗೆ ವಿದ್ಯಾಭ್ಯಾಸ ಸೌಕರ್ಯವಿಲ್ಲದೆ ಬಹಳ ಕಷ್ಟವಾಗಿದೆ. ಅಲ್ಲದೆ ಸಾರ್ವಜನಿಕರು ಅನೇಕ ಸಂದರ್ಭಗಳಲ್ಲಿ ಅವರ ವಿದ್ಯಾಭ್ಯಾಸಕ್ಕೆ ಅಡ್ಡಿ ಮಾಡುತ್ತಿದ್ದಾರೆ. ಕೆಲವು ಸಂದರ್ಭಗಳಲ್ಲಿ ದೂರು ಹೋದಮೇಲೆ ಸರ್ಕಾರದವರು ಅದಕ್ಕೆ ಅವಕಾಶವಿಲ್ಲದಂತೆ ಮಾಡಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ನಿಮ್ನವರ್ಗದ ಸುಮಾರು 70—80 ಸಾವಿರ ಪ್ರಜಾಸಂಖ್ಯೆಯಿರುವಾಗ ಕೇವಲ 3 ಸಾವಿರ ರೂಪಾಯಿಗಳನ್ನು ಮಾತ್ರ ಒಂದೇ ಒಂದು ವಿದ್ಯಾರ್ಥಿನಿಲಯಕ್ಕಾಗಿ ಖರ್ಚು ಮಾಡುತ್ತಿದ್ದಾರೆ.